ತಿಳಿಯಲಿಲ್ಲ. ನಾನೇನೂ ನೆನಪಿಟ್ಟುಕೊಳ್ಳಲು ನೀವೇನು ನನ್ನ ಸಂಬಂಧಿಗಳೇ? ನನಗೇ ಬೆಳಗಿನಿಂದ ವ್ಯಾಪಾರವಾಗಿಲ್ಲ, ಚಿಂತೆಯಲ್ಲಿದ್ದೇನೆ. ಎಂದು ಅವರನ್ನು ಆಚೆ ಹೋಗಲು ತಿಳಿಸಿದ.

'ಅಯ್ಯೋ ಬಿಡಪ್ಪಾ ಪೊಳ್ಳು ಮಾತಾಡಿ ನಿನ್ನ ಗಡಿಗೆಯೂ ಪೊಳ್ಳು ಎಂದು ತೋರಿಸಬೇಡಾ' ಎಂದು ತಾವು ಹಿಡಿದಿದ್ದ ಕೋಲಿನಿಂದ ಒಂದು ಗಡಿಗೆ ಬಡಿದರು. ಒಂದೇ ಏಟಿಗೆ, ಟೊಳ್ಳೆಂದು ಗಡಿಗೆ ಒಡೆದು ಹೋಯಿತು. ಇನ್ನಿಷ್ಟು ಸಿಟ್ಟಿಗೆದ್ದ ವಿಭವನು ಗುರುಗಳನ್ನು ಬೈಯುತ್ತ ಗಡಿಗೆ ಒಡೆದ ಬೆಲೆ ಕೊಟ್ಟೇ ಹೋಗಬೇಕೆಂದು ಅವರಿಂದ 59 ರೂಪಾಯಿ ಗಡಿಗೆ ಬೆಲೆ ವಸೂಲಿ ಮಾಡಿ ಕಳಿಸಿದ. ನಗುತ್ತ ಮಲ್ಲಪ್ಪ ಶಿಕ್ಷಕರು ವಿಶಾಲನ ಅಂಗಡಿಗೆ ಬಂದರು. ವಿಶಾಲನು ಗಡಿಗೆ ಖರೀದಿಗೆ ಬಂದವರನ್ನೂ ಲೆಕ್ಕಿಸದೇ, ಅಯ್ಯೋ ಸ್ವಲ್ಪ ನಿಲ್ಲಿ. ನನ್ನ ಗುರುಗಳು ಬಂದಿದ್ದಾರೆ, ಈಗ ವಯಸ್ಸಾಗಿದೆ. ಎಂದವನೆ ಓಡಿ ಹೋಗಿ ನಮಸ್ಕರಿಸಿದ. ಅಂಗಡಿಯ ಒಳಗೆ ಕರೆದು ಕೂಡಿಸಿದ. ಪಕ್ಕದಲ್ಲಿ ಮಣ್ಣಿನ ಗಡಿಗೆಯಲ್ಲಿ ತುಂಬಿಟ್ಟಿದ್ದ ನೀರನ್ನು ಗುರುಗಳಿಗೆ ಕುಡಿಯಲು ಕೊಟ್ಟ.

ಹಾಗೇ ಗುರುಗಳ ಆರೋಗ್ಯ ವಿಚಾರಿಸಿದ. ಆಗ ಮಲ್ಲಪ್ಪ ವಿಭವನ ಅಂಗಡಿಯಲ್ಲಿ ಮಾಡಿದಂತೆ ಗಡಿಗೆಯೊಂದಕ್ಕೆ ತಮ್ಮ ಕೋಲಿನಿಂದ ಹೊಡೆದರು. ಅಲ್ಲಿಯೇ ಇದ್ದ ಜನರು ಏ ಮುದುಕಾ ಹುಚ್ಚು ಗಿಚ್ಚು ಹಿಡಿದಿದೆಯಾ? ಎಲ್ಲಾ ಯಂತ್ರಗಳು ಬಂದು ಕೈಯಿಂದ ಗಡಿಗೆ ಮಾಡುವರೇ ಕಡಿಮೆಯಾಗಿದ್ದಾರೆ, ಕರಕುಶಲತೆ ಕಡಿಮೆಯಾಗಿದೆ. ಇಂತಹ ಚೆಂದದ ಚಿತ್ರದ ಗಟ್ಟಿ ಮುಟ್ಟಾದ ಗಡಿಗೆಯನ್ನು ಒಡೆದು ಹಾಕಿದೆಯಲ್ಲ ಬುದ್ಧಿ ಬೇಡವೆ? ಎಂದು ಬೈಯತೊಡಗಿದರು. ಒಂದೂ ಮಾತನಾಡದೇ ಶಿಕ್ಷಕರನ್ನೇ ನೋಡುತ್ತಾ ನಿಂತಿದ್ದ ವಿಶಾಲನಿಗೆ ಊರಿನ ಜನರು ಏನೋಡೋ ನಿನ್ನ ಗಡಿಗೆ ಒಡೆದರೂ ಸುಮ್ಮನಿದ್ದೀಯಲ್ಲ ಎಂದರು. ಅವನು ನಕ್ಕು, ನಮ್ಮ ಗುರುಗಳು ನನಗೆ ಕಲಿಸಿ ಬೆಳೆಸಿದವರು. ಅವರ ಗುಣ ನನಗೆ ಗೊತ್ತಿದೆ. ಕಾರಣವಿಲ್ಲದೇ ಅವರೇನೂ ಮಾಡಲಾರರು ಎಂದು ಎಳನೀರನ್ನೂ ಕುಡಿಸಿದ. ಒಳ್ಳೆಯ ಹುಡುಗ ವ್ಯಾಪಾರ ಮಾಡಲು ಬರುವುದಿಲ್ಲ. ವ್ಯವಹಾರ ತಿಳಿದಿಲ್ಲ ಎಂದು ಜನರು ಹೇಳುತ್ತಾ ಹೊರಟು ಹೋದರು.

ಗುರುಗಳು, ವಿಶಾಲ ನೀನು ಈಗ ಗಡಿಗೆ ಒಡೆದರೂ ಸುಮ್ಮನಿದ್ದೆ. ಈ ಶಿಕ್ಷಕನ ಮೇಲೆ ಕೋಪವಿಲ್ಲ ತಾನೇ ಎಂದರು. ಇಲ್ಲ ಗುರುಗಳೆ, ನಾವು ಶಾಲೆ ತಪ್ಪಿಸಿದ್ದಾಗ ತಾವೇ ಮನೆಗೆ ಬಂದು ಶಿಕ್ಷಣದಿಂದಲೇ ಜೀವನದ ಉದ್ಧಾರ ಎಂದು ನಮಗೆ ತಿಳಿ ಹೇಳಿ ಓದುವಂತೆ ಮಾಡಿದಿರಿ. ನಿಮ್ಮಂತಹ ಶಿಕ್ಷಕರು ನನಗೆ ದೊರೆತಿದ್ದು ನನ್ನ ಪುಣ್ಯ. ನೀವೇನೇ ಮಾಡಿದರೂ ಕಾರಣವಿರುತ್ತೆ, ನನಗೇನೂ ಕೋಪವಿಲ್ಲ ಎಂದ. ಹಾಗೇ ಒಡೆದ ಗಡಿಗೆಯ ಚೂರನ್ನು ಎತ್ತಿಕೊಂಡು, ಗುರುಗಳೆ ನೀವು ಗಡಿಗೆ ಒಡೆದದ್ದು ಸರಿಯಾಯಿತು. ನನಗೆ ಮತ್ತೊಂದು ಪಾಠ ಕಲಿಸಿದಿರಿ. ಆ ಗಡಿಗೆ ಸರಿಯಾಗಿ ಸುಟ್ಟಿರಲಿಲ್ಲ. ಒಂದು ವೇಳೆ ಸರಿಯಾಗಿ ಸುಡದ ಗಡಿಗೆಯನ್ನು ಗ್ರಾಹಕರು ಒಯ್ದಿದ್ದರೆ, ಗಡಿಗೆ ಬಾಳಿಕೆ ಬರುತ್ತಿರಲಿಲ್ಲ. ಹೀಗಾಗಿಯೇ ನೀವು ನನಗೆ ಅಂದಿನಂತೆ ಇಂದೂ ಸರಿಯಾದ ದಾರಿಯನ್ನೇ ತಿಳಿಸಿದಿರಿ. ಹಸಿ ಬುದ್ಧಿಗೂ ಬಿಸಿ ತಾಗಿಸಿದಿರಿ ಎಂದ. ಗುರುಗಳು ಆಗಲಪ್ಪ ನಿನ್ನ ಗುಣಕ್ಕೆ ಮೆಚ್ಚಿದೆ ಎಂದು ಹೊರಟು ಹೋದರು.

ಗುರುಗಳು ಹೋದ ಮೇಲೆ ಗಡಿಗೆ ಎತ್ತಿಡುವಾಗ ಅದರಲ್ಲಿ ನೋಟುಗಳು. ಅಯ್ಯೋ ದೇವರೆ! ಏನಿದು ಇಲ್ಲೇ ನಮ್ಮ ಗುರುಗಳು ಕುಳಿತಿದ್ದರು. ಅವರೇ ಇಟ್ಟು ಹೋದರಾ? ಎಂದು ನೋಡಿದಾಗ ಸಾವಿರಾರು ನೋಟಿನ ಕಟ್ಟುಗಳ ಮೇಲೆ ಗುರುಗಳ ಪತ್ರವಿತ್ತು. ಮಗಾ ನನಗೆ ವಯಸ್ಸಾಯಿತು. ನಾನು ಇಲ್ಲಿಯವರೆಗೆ ಶಾಲೆ, ಮಕ್ಕಳು ಎಂದು ಜೀವನ ಕಳೆದೆ. ಈಗ ತೀರ್ಥಯಾತ್ರೆಗೆ ಹೋಗಬೇಕೆಂದಿರುವೆ. ಆದ್ದರಿಂದ ನನಗೆ ಬಂದಿರುವ ನಿವೃತ್ತಿ ಹಣದಲ್ಲಿ ನಿನಗಿಷ್ಟು ಪಾಲು ಕೊಡುತ್ತಿರುವೆ. ದಾನ ಕೊಟ್ಟರೂ ಸತ್ಪಾತ್ರರಿಗೆ ಕೊಡಬೇಕಂತೆ. ಅದಕ್ಕೇ ನಿನ್ನನ್ನು ಪರೀಕ್ಷಿಸಿದೆ. ನೀನು ಪರೀಕ್ಷೆಯಲ್ಲಿ ಪಾಸಾದೆ. ನೀನು ಪಾಸಾದುದ್ದಕ್ಕೆ ನಾ ಕೊಟ್ಟ ಬಹುಮಾನವೆಂದು ತಿಳಿ. ನಿನಗೆ ಕೊಟ್ಟದ್ದು ವ್ಯರ್ಥವಾಗಲಾರದು. ವ್ಯಾಪಾರದಲ್ಲಿ ಮುಂದುವರೆ' ಎಂದಿತ್ತು. ಓದಿದ ವಿಶಾಲನ ಕಣ್ಣಲ್ಲಿ ನೀರು ಬಂತು. ವಿಶಾಲನು ಗುರುಗಳು ಹೋದ ದಾರಿಯಲ್ಲಿಯೇ ಅಚ್ಚರಿಯಿಂದ ನೋಡತೊಡಗಿದ. ಅಲ್ಲಿಗೆ ಬಂದ ತಮ್ಮನಿಗೆ ನಡೆದ ವಿಷಯವನ್ನೆಲ್ಲಾ ತಿಳಿಸಿದ. ಅಯ್ಯೋ ಅಣ್ಣಾ! ಒಡೆದ ಗಡಿಗೆಯ ಬೆಲೆ ಇಷ್ಟು ದುಬಾರಿಯಾಗಿರುತ್ತೆ ಎಂದು ತಿಳಿಯಲಿಲ್ಲ ಅವರವರ ಪಾಲು ಅವರಿಗೆ ಎಂದು ತನ್ನ ಗಡಿಗೆ ಒಡೆದ ಬೆಲೆ 50 ರೂಪಾಯಿ ಮುಟ್ಟಿ ನೋಡಿಕೊಂಡ. ■

---

## ಕುಂಚ ಪ್ರಪಂಚ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in





ಅಪ್ರತಿಮಾ ಆಕಾಶ್ ಎಂ.
ಯುಕೆಜಿ, ಪೂರ್ಣಪ್ರಜ್ಞ ಎಜುಕೇಶನ್ ಸೆಂಟರ್, ಬೆಂಗಳೂರು

ಮನಸ್ವಿ ಆರ್. ಕೆ.
8ನೇ ತರಗತಿ, ವಿಠ್ಠಲ್ ಜೇಸೀಸ್ ಶಾಲೆ, ವಿಟ್ಲ



